# ವ್ಯಾಖ್ಯಾನ

# ಕಪ್ಪು ಕಪ್ಪೆನಲು ಬೇಡವೋ

**Ref.:** ಇದು ಶ್ರೀ ಡಾ ವಿಜಯೇಂದ್ರ ದೇಸಾಯಿ ಅವರ ಲೇಖನ. ಅವರ ಅನುಮತಿ ಮೇರೆಗೆ ಇಲ್ಲಿ ಕೊಡಲಾಗಿದೆ.

ಸುಂದರ ಗೋಕುಲ. ಅಂದದ ನಂದನನ ಅರಮನೆ. ಶುಭ ಮುಂಜಾವು. ಯಶೋದೆಗೆ ಕಂದ ಯದುನಂದನನ ಮೇಲೆ ಬರುವ ತಕರಾರುಗಳ ಕೇಳುವ ಸಮಯ.

ಗುಂಪು ಗುಂಪಾಗಿ ಗೋಪಿಯರು ಬಂದರು. ಅಂದರು.

ಯಶೋಧೆ ನೀನು ನಿನ್ನ ಮಗ ಮುದ್ದು ಸುಂದರ ಕೃಷ್ಣ ಎನ್ನತ್ತಿ. ಆದರೆ ನಿನ್ನ ಮಗ ಸುಂದರನಲ್ಲ. ಆತನ ಬಣ್ಣ ನೋಡೆ. ಕರಿ ಕೃಷ್ಣ ಎಂದು ಬಾಲಕೃಷ್ಣನನ್ನು ಹಿಯಾಳಿಸಿದರು.

ಯಶೋದೆ - ಹಾಗನ್ನಬೇಡಿ. ಕಪ್ಪು ಎಂದು ಬಾಲಕೃಷ್ಣನನ್ನು ಹೀಯಾಳಿಸದಿರಿ. ಎನ್ನುತ್ತಾ ಕಪ್ಪಿನ, ಕೃಷ್ಣನ ಲೀಲೆಯನ್ನು ಮಹಿಮೆಯನ್ನು ಹೇಳ ತೊಡಗುತ್ತಾಳೆ.

ದಾಸರು ಇದನ್ನೇ ನೆಪ ಮಾಡಿದರು. ಹರಿಮಹಿಮೆ ಸುಂದರ ಪದಗಳ ಗೀತೆಯಲ್ಲಿ ಸೂರಾಡಿದರು.

ಬಣ್ಣ ಕಪ್ಪು ಎಂಬ ತಾತ್ಸಾರ ಬೇಡ, ಎಂದು ಹೇಳುತ್ತಾ ಕಪ್ಪು ಬಣ್ಣದ ವ್ಯಾಪ್ತಿ ಅದರ ಪ್ರಾಮುಖ್ಯತೆ, ಅದಕ್ಕೆ ದೃಷ್ಟಾಂತಗಳನ್ನು ದಾಸರು ಸಾರುತ್ತಾರೆ. ಕೊನೆಗೆ ಕಪ್ಪು ಬಣ್ಣದ ಮಹಿಮೆ ದೇವರ ಮಹಾತ್ಮೆಯಲ್ಲಿ ವಿಲೀನವಾಗುತ್ತದೆ.

ಕೃಷ್ಣ ಕಪ್ಪು. ಎಂತಹ ಕಪ್ಪು?

ಎಲ್ಲರೂ ಒಪ್ಪುವ ಕಪ್ಪು. ಎಲ್ಲರ ಮನ ಸೆಳೆವ ಕಪ್ಪು.

ಸಪ್ಪೆ ಕಪ್ಪು ಅಲ್ಲ. ಸಿಹಿ ಕಪ್ಪು. ಸವಿ ಕಪ್ಪು. ನೋಡಿದಷ್ಟು ನೋಡಬೇಕು ಎಂಬ ಕಪ್ಪು.

ಕಪ್ಪು ಕಪ್ಪಲ್ಲ ಕೃಷ್ಣ.

ಆತ ನೀಲ ಮೇಘ ಶಾಮ. ನೀರು ತುಂಬಿದ ಘನ ಮೋಡಗಳ ಆಕರ್ಷಕ ವರ್ಣ. ಅಂತಹ ನೀಲ ಮೇಘ ಶ್ಯಾಮ. ನೀಲ ಮೇಘ ಎಂದರೆ ಮೋಡಗಳ ನೀಲ ವರ್ಣ. ಮತ್ತೆ ಮೇಲೆ ಶ್ಯಾಮ. ಅಂದರೆ ಕಪ್ಪು. ಅಂದರೆ ನೀಲ ಮತ್ತು ಕಪ್ಪು ವರ್ಣಗಳ ಅಂದದ ಮಿಶ್ರಣ. ಯೋಗ್ಯವಾದ ಆಕರ್ಷಕ ಅನುಪಾತ ದಲ್ಲಿ.

ಕರ್ಷತಿ ಇತಿ ಕೃಷ್ಣಃ. ಎಲ್ಲರನ್ನೂ ಆಕರ್ಷಿಸುವವನೇ ಶ್ರೀ ಕೃಷ್ಣ. ಮುದ್ದು ಮಗುವಾಗಿದ್ದಾಗಲೂ ಅಷ್ಟೇ. ತುಂಬು ಯುವಕ ನಾಗಿದ್ದಾಗಲೂ ಅಷ್ಟೇ. ಒಮ್ಮೆ ಬಾಲಕೃಷ್ಣನನ್ನು ನೋಡಿದರೆ ಮನದ ತುಂಬ ಮೋದ ಪ್ರಮೋದ. ಆನಂದವೋ ಆನಂದ. ದೃಷ್ಟಿ ಕಿತ್ತಿ ಬೇರೆಡೆ ನೋಡಲು ಮನಸ್ಸೇ ಆಗುತ್ತಿರಲಿಲ್ಲ ವಂತೆ ನೋಡಿದವರಿಗೆ !

ಸಹಸ್ರಚಂದ್ರರನ್ನು ನಾಚಿಸುವ ಕಾಂತಿ ಮುದ್ದು ಮುಖದ ಮೇಲೆ. ನಲಿದಾಡುವ ದಟ್ಟ ಕಪ್ಪು ಮುಂಗುರು ಹಣೆಯ ಮೇಲೆ. ಆಕರ್ಷಕ ಕಾಮನಬಿಲ್ಲಿನ ಹುಬ್ಬುಗಳು. ಅರಳಿದ ತಾವರೆ ಕಂಗಳು.

ನೀಳ ನಾಸಿಕ. ಹವಳದ ಕೆಂದುಟಿ. ಜಗವ ಮೋಹಿಸುವ ಮಾಸದ ಮುಗುಳುನಗೆ. ಭಯ

ಪರಿಹರಿಸಿ ಭರವಸೆ ಕೊಡುವ ಮುಖಭಾವ. ಅನುಗ್ರಾಹಕ ದೃಷ್ಟಿ. ತಲೆಯ ಮೇಲೆ ಯಶೋಧೆ ಕಟ್ಟಿದ ಜುಟ್ಟು. ಮೇಲೊಂದು ಅವಳೇ ಸಿಕ್ಕಿಸಿದ ನವಿಲುಗರಿ. ಕೈಯಲ್ಲಿ ಕೊಳಲು. ಇಂತಹ ಸೌಂದರ್ಯದ ನಡುವೆ ಎದ್ದು ಕಾಣುವ ಕೃಷ್ಣನ ಶಾಮ ವರ್ಣ. ಕೃಷ್ಣನಿಂದ ಕಪ್ಪು ಬಣ್ಣ ಮಹತಿ ಪಡೆಯಿತು.

**ಕಪ್ಪು ಎನ್ನಲು ಬೇಡವೋ ಶ್ರೀ ಹರಿಯನ್ನು**

**ಕಪ್ಪು ಎನ್ನಲು ಬೇಡವೋ ! || ಪ ||**

ನೀಲ ಮೇಘ ಶಾಮ ಸುಂದರ. ಶ್ರೀ ಕೃಷ್ಣನೇ ಶ್ರೀಹರಿ ಅಲ್ಲವೇ ! ಆಕರ್ಷಕ ಕೃಷ್ಣ. ಆಕರ್ಷಕ ಶ್ರೀ ಹರಿ. ಹರಿಗೆ ಕರಿ ಎನ್ನಬೇಡಿ. ತಥ್ಯ ಹರಿಗೂ ಕೃಷ್ಣನಿಗೂ ಅಭೇದ. ಕೃಷ್ಣನಿಗೂ ರಾಮನಿಗೂ ಅಭೇದ. ಅವೆಲ್ಲ ಪರಮಾತ್ಮನದೇ ಅವತಾರಗಳು. ಪರಮಾತ್ಮನಿಗೂ ಅವನ ಅವತಾರಕ್ಕೂ ಕಿಂಚಿತ್ತು ಭೇದವಿಲ್ಲ. ಎಲ್ಲವೂ ಮೂಲರೂಪದಷ್ಟೇ ಸರ್ವ ಸಮರ್ಥ.

**ಹರಿಯ ಮಧ್ಯದಿ ಕಪ್ಪು, ಹಾಲಾಹಾಲವು ಕಪ್ಪು,**

**ಪರಮ ಅಶ್ವವೇ ಕಪ್ಪು,**

**ಪಾರಿಜಾತವೇ ಕಪ್ಪು, ಕರಿಗಳೆಲ್ಲವೂ ಕಪ್ಪು, ಸುಲಲಿತ ವರನೇ ಕಪ್ಪು**

**ಸನ್ನುತವಾದ ಹರಿಹಯ ನೀಲಿ ಕಪ್ಪು ಅಂಗನೇ ಕೇಳು**

**ಜಗದೊಳು ಗುಲಗಂಜಿಯ ಶಿರಗಳೆಲ್ಲವೂ ಕಪ್ಪು II 1 II**

**ಹರಿಯ ಮಧ್ಯದ ಕಪ್ಪು.** ಹರಿಯ ಮಧ್ಯ ಭಾಗವೆಂದರೆ ಉದರ ಪ್ರದೇಶ. ಕಪ್ಪು ಎಂದರೆ ತಗ್ಗು ಎಂಬ ಅರ್ಥವಿದೆ. ಹರಿಯ ಮಧ್ಯ ಭಾಗದ ಕಪ್ಪು ಎಂದರೆ ಹರಿಯ ಉದರ ಭಾಗ ತಗ್ಗಾಗಿದೆ. ತೆಳ್ಳಗಾಗಿದೆ. ಶ್ರೀಮನ್ ಮಧ್ವಾಚಾರ್ಯರು ಹೇಳುತ್ತಾರೆ - ಉದರಂ ಚಿಂತ್ಯಮೀಶಸ್ಯ ತನುತ್ವೇಪಿ ಅಖಿಲಂ ಭರಂ ವಲಿತ್ರಯಾಂಕಿತಂ -- ಇಡೀ ಬ್ರಹ್ಮಾಂಡವನ್ನೇ ಹರಿ ಉದರದಲ್ಲಿ ಇಟ್ಟುಕೊಂಡಿದ್ದಾನೆ. ಆದರೂ ಆತನ ಉದರ ಪ್ರದೇಶ ತೆಳುವಾಗಿದೆ. ತ್ರಿವಳಿಗಳಿಂದ ಶೋಭಿತವಾಗಿದೆ. ಸುಂದರವಾಗಿದೆ ಇಂತಹ ಹರಿಯ ಉದರವನ್ನು ಸ್ಮರಿಸಬೇಕು ಎಂದು ಹೇಳುತ್ತಾರೆ.

**ಹಾಲ ಹಲವೆ ಕಪ್ಪು.** ಹಾಲಹಲ ವಿಷ ಬಹು ತೀಕ್ಷ್ಣ. ಕಡುಗಪ್ಪು. ಕಿಂಚಿತ್ ಕುಡಿದ ಶಿವನಿಗೂ ತಡೆಯಲಾಗಲಿಲ್ಲ. ಕಂಠ ನೀಲಕಪ್ಪಾಯಿತು. ನೀಲಕಂಠ ಎಂದೇ ಪ್ರಸಿದ್ದನಾದ. ಇಂತಹ ತೀಕ್ಷ್ಣ ವಿಷದ ಬಣ್ಣ ಕಪ್ಪು.

**ಪರಮ ಅಶ್ವವೇ ಕಪ್ಪು**. ಕರಿಯ ಬಣ್ಣದ ಕುದುರೆಗಳು ಶ್ರೇಷ್ಠವಾಗಿವೆ.

**ಪಾರಿಜಾತವೇ ಕಪ್ಪು**. ಪಾರಿಜಾತ ಒಂದು ದೇವ ವೃಕ್ಷ. ಸಮುದ್ರ ಮಂಥನದಲ್ಲಿ ಹುಟ್ಟಿದ್ದು. ಗಿಡ ಕಪ್ಪು, ಹೂವು ಬಿಳಿ, ದೇಟು ಕೆಂಪು. ಇದು ಅಮೂಲ್ಯ ಪುಷ್ಪ. ಕಪ್ಪು ಶಬ್ದಕ್ಕೆ ಕಾಣಿಕೆ ಎಂಬುದು ಮತ್ತೊಂದು ಅರ್ಥ. ಶ್ರೀ ಕೃಷ್ಣ ಪಾರಿಜಾತ ಹೂವನ್ನು ರುಕ್ಮಿಣಿಗೆ ಕಾಣಿಕೆ ಕೊಟ್ಟ. ಕೋಪಗೊಂಡ ಸತ್ಯಭಾಮೆಗೆ ಪಾರಿಜಾತ ವೃಕ್ಷವನ್ನೇ ಸುರರ ಗೆದ್ದು ತಂದು ಕಾಣಿಕೆಯಾಗಿ ಮೀಸಲಿಟ್ಟ.

**ಕರಿ ಗಳೆಲ್ಲವೂ ಕಪ್ಪು.** ಎಲ್ಲಾ ಆನೆಗಳು ಕಪ್ಪು. ಆನೆ ಅತ್ಯಂತ ಬಲಿಷ್ಠ. ಬಲು ಬಲಿಷ್ಠ ಪ್ರಾಣಿಯ ಬಣ್ಣ ಕಪ್ಪು.

**ಸುಲಲಿತ ವರನೇ ಕಪ್ಪು.** ಸುಲಲಿತ ಎಂದರೆ ಅತ್ಯಂತ ಸುಂದರನಾದ. ವರ ಎಂದರೆ ಸರ್ವ ಶ್ರೇಷ್ಠ. ಸರ್ವೋತ್ತಮ. ಆದ್ದರಿಂದ ಮನ್ಮಥ ಜನಕನಾದ ಶ್ರೀ ಕೃಷ್ಣನೇ ವರ ಎಂದರೆ ಸರ್ವೋತ್ತಮ. ಇಂಥ ಕೃಷ್ಣನ ಬಣ್ಣ ಕಪ್ಪು

**ಸನ್ನುತವಾದ ಹರಿಹಯ ನೀಲಿ ಕಪ್ಪು.** ಹರಿ ಹಯ ಎಂದರೆ ಹಯ ಮುಖದ ಶ್ರೀಹರಿ ಹಯವದನ. ಆ ಹಯವದನನೇ ಈ ಶ್ರೀ ಕೃಷ್ಣ. ಸನ್ನುತ ಎಂದರೆ ಉನ್ನತವಾದ, ಉತ್ಕೃಷ್ಟ ಸರ್ವಶ್ರೇಷ್ಠ ಶ್ರೀ ಕೃಷ್ಣ. ಈ ಸರ್ವಶ್ರೇಷ್ಠನ ಬಣ್ಣ ಕಪ್ಪು.

**ಅಂಗನೆ ಕೇಳು.** ಕೇಳಿ ಅಂಗನೆಯರೇ, ಗೋಪಿಯರೇ ಕೇಳಿ. ಇದು ಜಗದೊಳು ನೀಲ ಮೇಘ ಶಾಮನ ಮಹಿಮೆ. ಇದು ಕಪ್ಪಿನ ಮಹಿಮೆ.

**ಜಗದೊಳು ಗುಲಗುಂಜಿ ಶಿರಗಳೆಲ್ಲವು ಕಪ್ಪು.** ಶ್ರೇಷ್ಠವಾದ ಗುಲಗಂಜಿಯ ಬಣ್ಣ ಕೆಂಪು. ಆದರೆ ಅದರ ಶಿರೋ ಭಾಗ ಮತ್ತೆ ಕಪ್ಪು. ಶಿರೋ ಭಾಗವೇ ಮುಖ್ಯ. ಮುಖ್ಯ ಭಾಗವೇ ಕಪ್ಪು. ಇದು ಕಪ್ಪಿನ ಒಪ್ಪುವ ಮಹಿಮೆ.

**ಬರೆವ ಕಂಟವೆ ಕಪ್ಪು, ಭಾರದ್ವಾಜವೆ ಕಪ್ಪು,**
**ವರ ರಾಘವನ್ನ ಪಾವನಾಂಗವೆ ಕಪ್ಪು,**
**ಎರೆವ ಭೂಮಿಯು ಕಪ್ಪು, ಎಸೆವ ಕಸ್ತೂರಿ ಕಪ್ಪು**
ಸರಸಿಜೋದ್ಭವ ಕಪ್ಪು
**ಸುಲಲಿತ ವರನೆ ಕಪ್ಪು, ಅಂಗನೆ ಕೇಳು**
**ಮೂರು ಲೋಕದಿ ನಮ್ಮ ಮುದ್ದು ಕೃಷ್ಣನೆ ಕಪ್ಪು || 2 ||**

**ಬರೆಯುವ ಕಂಟವೇ ಕಪ್ಪು ಭಾರಧ್ವಾಜವೆ ಕಪ್ಪು.** ಅಕ್ಷರ ವರ್ಣಗಳನ್ನು ಬರೆಯುವ ಮಶಿಯ ವರ್ಣವೂ ಕಪ್ಪು ಕಪ್ಪೆ. ಭಾರದ್ವಾಜ ಒಂದು ವಿಶಿಷ್ಟ ಪಕ್ಷಿ. ಅದರ ಬಣ್ಣವೂ ಕಪ್ಪು.

**ವರ ರಾಘವನ್ನ ಪಾವನಾಂಗವೆ ಕಪ್ಪು.** ಸರ್ವೋತ್ತಮ ಶ್ರೀರಾಮನ ಮಂಗಳಕರ ದೇಹವೂ ನೀಲಮೇಘ ವರ್ಣವೇ.

**ಎರೆವ ಭೂಮಿಯು ಕಪ್ಪು.** ಜಗಕೆ ಸಕಲ ಧಾನ್ಯಗಳನ್ನು ಕೊಡುವ ಆಹಾರವನ್ನು ಕೊಡುವ ಫಲಗಳನ್ನು ಕೊಡುವ ಭೂಮಿ ಕಂದು ಕಪ್ಪು ಅದರಲ್ಲಿ ಫಲವತ್ತಾದ ಎರೆಭೂಮಿ ಇನ್ನೂ ಕಪ್ಪು

**ಅಂಗನೆ ಕೇಳು, ಮೂರು ಲೋಕದಿ ನಮ್ಮ ಮುದ್ದು ಕೃಷ್ಣನೆ ಕಪ್ಪು.** ಇಂತು ಕೇಳು ಗೋಪಿ - ಮೂರು ಲೋಕದಲ್ಲಿ ತ್ರಿಪುರ ಸುಂದರ ನಮ್ಮ ಮುದ್ದು ಕಪ್ಪಿನ ಮುದ್ದು ಕೃಷ್ಣನೇ ಸರಿ.

**ಶಾಲಿಗ್ರಾಮವೆ ಕಪ್ಪು, ಸರಸಿಜೋದ್ಭವ ಕಪ್ಪು, ಲೋಲಂಬಗಳು ಕಪ್ಪು**
**ರುಚಿತ ಕೋಗಿಲೆ ಕಪ್ಪು, ಮಾಲವುತ್ಸವೆ ಕಪ್ಪು, ನಿರ್ಮಲ ಚಿತ್ರವೆ ಕಪ್ಪು**
**ಕಾಳಿಂದೀ ನದಿಯೆ ಕಪ್ಪು, ಕಾಮಿನಿಯರ**

**ಕರಿಮಣಿ ಸರವೆ ಕಪ್ಪು, ಅಂಗನೆ ಕೇಳು**
**ಮೂರು ಲೋಕದಿ ನಮ್ಮ ಪುರಂದರ ವಿಠಲನ ಮೂರುತಿ ಕಪ್ಪು || 3 ||**

**ಶಾಲಿಗ್ರಾಮವೇ ಕಪ್ಪು.** ಸದಾ ಅಪಾರ ಸಾಕ್ಷಾತ್ ಹರಿ ಸಾನಿಧ್ಯ. ಪರಮ ಮಂಗಳಕರ. ಸಕಲ ಜಗವ ಪಾವನಿಕರಿಸುವ ಅಮೂಲ್ಯ ಶಾಲಿಗ್ರಾಮ. ಇಂಥ ಮಹಿಮೆ ಶಾಲಿ ಗ್ರಾಮದ ಬಣ್ಣ ಯಾವುದು? ಕಡು ಕಪ್ಪು ಅಲ್ಲವೇ.

**ಸರಸಿಜೋದ್ಭವ ಕಪ್ಪು.** ಜಗತ್ತಿಗೆ ಅತ್ಯಂತ ಹಿರಿಯ ಸರಸಿಜೋದ್ಭವ. ಅಂದರೆ ಬ್ರಹ್ಮ. ಅವನಿಗೂ ಹಿರಿಯನೊಬ್ಬನಿದ್ದಾನೆ. ಹಿರಿಯತನದಲ್ಲಿ ನೋಡೆ ಸರಸಿಜೋದ್ಭವನಯ್ಯ ಬ್ರಹ್ಮನ ತಂದೆ. ಆತನೇ ಕಪ್ಪು. ಆತನೇ ಕೃಷ್ಣ. ನೀಲ ಮೇಘ ಶಾಮ. ಬ್ರಹ್ಮ ಹುಟ್ಟಿದ್ದು ಕಮಲದಲ್ಲಿ ಸರಸಿಜೋದ್ಭವ. ಕಮಲ ಹುಟ್ಟಿದ್ದು ವಿಷ್ಣುವಿನ ನಾಭಿಯಲ್ಲಿ. ವಿಷ್ಣುವಿನ ಬಣ್ಣ ಸುಂದರ ನೀಲ ವರ್ಣ. ಹೀಗೆ ಹಿರಿಯನ ಹಿರಿಯನ ಬಣ್ಣ ಕಪ್ಪು. ಏನಪ್ಪಾ ಕಪ್ಪಿನ ಮಹಿಮೆ !

**ಲೋಲಂಬಗಳು ಕಪ್ಪು, ರುಚಿತ ಕೋಗಿಲೆ ಕಪ್ಪು.** ತೂಗಾಡುವ ಲಂಭಗಳು ಕಪ್ಪು. ಸುಮಧುರ ಧ್ವನಿಗೆ ಪ್ರಸಿದ್ಧವಾದ ಕೋಗಿಲೆಯ ಬಣ್ಣ ಕಪ್ಪು.

**ಕಾಳಿಂದೀ ನದಿಯೆ ಕಪ್ಪು.** ಪ್ರಸಿದ್ಧ ಕಾಳಿಂದಿ ನದಿಯ ಬಣ್ಣ ಕಪ್ಪಾಗಿದೆ.

**ಕಾಮಿನಿಯರ ಕರಿಮಣಿ ಸರವೆ ಕಪ್ಪು.** ಮುತ್ತೈದೆ ಸ್ತ್ರೀಯರಿಗೆ ಬಲುಮುಖ್ಯ ಕರಿಮಣಿ ಸರ. ಮಂಗಳಸೂತ್ರ. ಕರಿಮಣಿಗಳ ಬಣ್ಣ ಕಪ್ಪು.

**ಅಂಗನೆ ಕೇಳು ಮೂರು ಲೋಕದಿ ನಮ್ಮ ಪುರಂದರ ವಿಠಲನ ಮೂರುತಿ ಕಪ್ಪು**. ಗೋಪಿ ಕೇಳು. ಮೂರು ಲೋಕದಲ್ಲಿ ನಮ್ಮ ಪುರಂದರ ವಿಠಲನ ಮೂರುತಿ ಕಡು ಕಪ್ಪು. ಇಂತಹ ಅಪಾರ ಮಹಿಮೆಯ ಕಪ್ಪು ಬಣ್ಣವನ್ನು ತಾತ್ಸಾರ ಮಾಡಬೇಡಿ. ಗೋಪಿಯರೇ ಬಾಲಕೃಷ್ಣ ಕಪ್ಪೆಂದು ಹೀಯಾಳಿಸಬೇಡಿ. ಆತನೇ ಮೂರು ಲೋಕದ ದೊರೆ. ಆತನೇ ಸಿರಿ ರಮಣ. ಆತನೇ ಬ್ರಹ್ಮಾದಿ ದೇವತೆಗಳ ತಂದೆ. ಆತನೇ ಜಗದ ಜನರಿಗೆ ತಂದೆ ತಾಯಿ, ಬಂಧು ಬಳಗ. ಎಲ್ಲವೂ ಹೌದು. ಆತನೇ ಸುಂದರ ಕಪ್ಪು. ಚಿತ್ರ ನಿರ್ಮಲ ಶುದ್ಧ ಕಪ್ಪು ಮೂರ್ತಿ ಶ್ರೀ ಕೃಷ್ಣ. ಆತನೇ ನಮ್ಮ ಕಡು ಕಪ್ಪುಮೂರ್ತಿ ಪುರಂದರ ವಿಠಲರೇಯ.

**ತಥ್ಯ -**

1. ನೇಹ ನಾನಾಸ್ತಿ ಕಿಂಚನ

   ಪರಮಾತ್ಮನಿಗೂ ಅವತಾರಗಳಿಗೂ ಕಿಂಚಿತ್ತು ಭೇದ ಇಲ್ಲ ಶ್ರೀಹರಿಯೇ ಶ್ರೀ ರಾಮ. ಶ್ರೀ ರಾಮನೇ ಶ್ರೀ ಕೃಷ್ಣ. ಎಲ್ಲವೂ ಸರ್ವ ಸಮರ್ಥ.

2. ಕಪ್ಪು ತಮೋ ಗುಣದ ಬಣ್ಣ. ಪರಮಾತ್ಮ ಕಪ್ಪು ಎಂದರೆ ತಮೋ ಗುಣವನ್ನು ಮೆಟ್ಟಿ ನಿಂತವ. ಆತ ತ್ರಿಗುಣಾತೀತ. ತ್ರಿಗುಣಗಳು ಅವನ ಅಧೀನ. ಆತ ಅಪ್ರಾಕೃತ ಪುರುಷ. ಸತ್ ಚಿತ್ ಆನಂದ ಮಯ.

3. ಕಪ್ಪು = ಕ +ಪ +ಪ +ಉ =

   ಕ ಎಂದರೆ ಬ್ರಹ್ಮ. ಲಕ್ಷಣ ತಯಾ ಸಕಲ ಜೀವಿಗಳನ್ನು,

   ಪ ಎಂದರೆ ಪಾಲನೆ ಮಾಡುವವ.

   ಇನ್ನೊಂದು ಪ ಎಂದರೆ ಚೆನ್ನಾಗಿ ಪಾಲನೆ ಮಾಡುವ. ನಿಯಮನ ಮಾಡುವವ ಅರ್ಥಾತ್ ಸೃಷ್ಟಿ ಸ್ಥಿತಿ ಲಯ ಜ್ಞಾನ ಅಜ್ಞಾನ, ಬಂಧ ಮೋಕ್ಷಾದಿ ಅಷ್ಟಕತೃತ್ವದ ಪ್ರಭು.

   ಉ ಎಂದರೆ ಉತ್ತಮ ಸರ್ವೋತ್ತಮನಾದ ಶ್ರೀಹರಿ

ಒಟ್ಟು ಅನಂತ ಅವತಾರಗಳ ಪ್ರಭು ಶ್ರೀಹರಿ ಸರ್ವೋತ್ತಮ. ಅಪ್ರಾಕೃತ ಸತ್ ಚಿತ್ ಆನಂದಮಯ. ತ್ರಿಗುಣಾತೀತ. ಅನಂತ ಕಲ್ಯಾಣ ಗುಣ ಪರಿಪೂರ್ಣ. ಅಷ್ಟಕರ್ತೃತ್ವದ ಪ್ರಭು.

ಶ್ರೀ ಕೃಷ್ಣಾರ್ಪಣಮಸ್ತು.

ಡಾ ವಿಜಯೇಂದ್ರ ದೇಸಾಯಿ